# ಸರ್ಕಾರಿ ಪ್ರೌಢ ಶಾಲೆ ಬೇಗೂರು , ಬೆಂಗಳೂರು-೬೮

## ೮ ನೇ ತರಗತಿ ಪ್ರಥಮ ಭಾಷೆ ಕನ್ನಡ ನೈದಾನಿಕ ಪರೀಕ್ಷೆ ೨೦೧೬-೧೭

೧. ಕೆಳಗೆ ಕೊಟ್ಟಿರುವ ಪದಗಳಲ್ಲಿ ಇರುವ ಸ್ವರಾಕ್ಷರವನ್ನು ಮಾತ್ರ  ಕೊಟ್ಟಿರುವ ಸ್ಥಳದಲ್ಲಿ ಬರೆಯಿರಿ.

ಉದಾ : ಅಜ್ಞಾನ : ಸ್ವರಾಕ್ಷರ   ಅ

ಅ)ಏತನೀರಾವರಿ :   ಆ) ಊಸರವಳ್ಳಿ :   ಇ) ಇಳುವರಿ:

ಈ)ಅನಿಲ :   ಉ) ಆರಾಧನೆ :   ಊ)ಉಪನಯನ :

೨. ಕೊಟ್ಟಿರುವ ಪದಗಳಲ್ಲಿ ವ್ಯಂಜನದಿಂದ ಪ್ರಾರಂಭವಾಗುವ ಪದವನ್ನು ಮಾತ್ರ ಪ್ರತ್ಯೇಕಿಸಿ  ಬರೆಯಿರಿ.

ಅರವಳಿಕೆ , ಕನ್ನಡ , ಒತ್ತಾಯ ,ಏಳುಬೀಳು , ಊರುಭಂಗ , ಎರವಲು ,ಸಮರಸ ,ರಸಾಯನ

೩.ಕೊಟ್ಟಿರುವ  ವ್ಯಂಜನ ಮತ್ತು ಸ್ವರವನ್ನು ಆಧರಿಸಿ  ಬಿಟ್ಟ ಸ್ಥಳವನ್ನು ತುಂಬಿರಿ.

ನ್ + ಇ = -   ರ್+ ಏ= -   ಸ್ +ಆ =  -   ಜ್+ಊ= -   ಕ್+ಋ = -   ಮ್+ಔ= -

೪. ಸಜಾತೀಯ ಮತ್ತು ವಿಜಾತೀಯ ಒತ್ತಕ್ಷರಗಳನ್ನು ಹೊಂದಿರುವ ಪದಗಳನ್ನು ಪ್ರತ್ಯೇಕಿಸಿ ಬರೆಯಿರಿ.

ನಿಮ್ಮ ,ಕಲ್ಲು,ಮನಿತ್ವ ,ಅರ್ಥ, ಬಣ್ಣ ,ಉದ್ಯೋಗ ,

೫.ಕೊಟ್ಟಿರುವ ವಾಕ್ಯಗಳಲ್ಲಿ ಇರುವ ನಾಮಪದವನ್ನು ಗುರುತಿಸಿ ಗೆರೆಎಳೆಯಿರಿ.

ಅ) ರಮೇಶನು ಮರವನ್ನು ಏರಿದನು .

ಆ) ಆ ಹುಡುಗನು ಕುರುಡನಿಗೆ ರಸ್ತೆ ದಾಟಲು ಸಹಾಯ ಮಾಡಿದನು .

೬.ವಾಕ್ಯಗಳಲ್ಲಿ ಅಡಗಿರುವ ದೋಷವನ್ನು ಗುರುತಿಸಿ ಸರಿಪಡಿಸಿ ಬರೆಯಿರಿ.

ಅ)ಆದಿತ್ಯನು ಸಂತೆಗೆ ಓದನು .

ಆ) ಅವನು ವೇಗವಾಗಿ ಹೋಡಿದನು .

೭. ಕೆಳಗಿನ ವಾಕ್ಯದಲ್ಲಿರುವ  ವಿಶೇಷಣವನ್ನು ಗುರುತಿಸಿ ಬರೆಯಿರಿ.

ಅ)ರಾಮನು ಜಾಣ ಹುಡುಗ.

ಆ)ಸೀತೆಯು ಮಧುರ ಕಂಠದಿಂದ ಹಾಡಿದಳು .

೮. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಅ)ಮನೆಯಲ್ಲಿ   ಆ)ಕಣ್ಣುಗಳಲ್ಲಿ

೯.ಏಕವಚನ ಮತ್ತು ಬಹವಚನ ಪದಗಳನ್ನು ಪ್ರತ್ಯೇಕಿಸಿ ಬರೆಯಿರಿ.

ಸ್ನೇಹಿತರು, ಮನೆ, ರಾಜ, ಹುಡುಗರು , ಮಕ್ಕಳು , ಬಾಲಕಿ

೧೦.ಈ ಕೆಳಗಿನ ಚಿತ್ರ ಗಳನ್ನು  ಹೆಸರಿಸಿ  ಅದಕ್ಕೆ ಒಂದು ಸಮಾನಾರ್ಥಕ ಪದ ಬರೆಯಿರಿ.





mamatabhagwat1@gmail.com

೧೧.ಕೆಳಗಿನ ಗದ್ಯಭಾಗವನ್ನು ಓದಿ ,ಅರ್ಥಮಾಡಿಕೊಂಡು ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಎಳ್ಳುಬೆಲ್ಲತಿಂದು ಒಳ್ಳೆಯ ಮಾತಾಡಿ. ಸಂಕ್ರಾಂತಿಅಂದಾಕ್ಷಣ ನೆನಪಾಗುವ ಮಾತಿದು.ಎಳ್ಳುಬೆಲ್ಲ ಇಲ್ಲದ ಸಂಕ್ರಾಂತಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.ನಿಮಗೆ ಗೊತ್ತೆ? ಸಂಕ್ರಾಂತಿಯಲ್ಲಿ ಪುರಾಣ ಕಾಣಿಸುತ್ತದೆ. ವಿಜ್ಞಾನ ಇಣುಕುತ್ತದೆ.ಸಂಪ್ರದಾಯ ಮಾತಾಡುತ್ತದೆ.ಕೃತಜ್ಞತಾ ಭಾವ ಕೈ ಹಿಡಿಯುತ್ತದೆ.ನಮಗೆ ಒಳಿತಾಗಲಿ ನಮ್ಮ ಬದುಕಲ್ಲಿ ಸಂ-ಕ್ರಾಂತಿಯಾಗಲಿ ಎಂಬ ಆಶಾವಾದ ಜೊತೆಗೇ ಇರುತ್ತದೆ.

ಯುಗಾದಿ, ದೀಪಾವಳಿ,ಮೊಹರಂ,ಈದ್ ಮಿಲಾದ್ ,ಮಹಾಲಯ ಅಮಾವಾಸ್ಯೆ ಮುಂತಾದವೆಲ್ಲ ಜನಗಳ ಹಬ್ಬ. ಆದರೆ ಸಂಕ್ರಾಂತಿ ಯ ಸೊಗಸೇ ಬೇರೆ. ಇದು ದನಗಳ ಹಬ್ಬ. ಉಳಿದೆಲ್ಲ ಹಬ್ಬಗಳಲ್ಲೂ ತಾನು ಹೊಸ ಬಟ್ಟೆಧರಿಸಿ ಮೆರೆವ ಮನುಷ್ಯ ಸಂಕ್ರಾಂತಿಯಲ್ಲಿ ಜಾನುವಾರಗಳ ಅಲಂಕಾರಕ್ಕೆ ನಿಲ್ಲುತ್ತಾನೆ.ವರ್ಷವಿಡೀ ದುಡಿಮೆಯಲ್ಲಿ ತೊಡಗಿದ್ದ ದನಕರುಗಳಿಗೆ ಪೂಜೆ ಮಾಡುತ್ತಾನೆ.ಸಂಕ್ರಾಂತಿಯ ವೇಳೆಗೆ ಇಡೀ ವರ್ಷದ ದುಡಿಮೆ ರೈತಾಪಿ ಜನರ ಕೈಗೆ ಬಂದಿರುತ್ತದಲ್ಲ! ಹಾಗೆ ದುಡಿದದ್ದಕ್ಕೆ ದನ ಕರುಗಳಿಗೆ ಥ್ಯಾಂಕ್ಸ್ (ವಂದನೆ) ಹೇಳಲಿಕ್ಕೆ ಅವುಗಳನ್ನು ಸಿಂಗರಿಸಿ ಮೆರವಣಿಗೆ ಮಾಡಿ ಕಿಚ್ಚು ಹಾಯಿಸಿ ರೈತ ಖುಷಿ ಪಡುತ್ತಾನೆ.

೧.ಸಂಕ್ರಾಂತಿ ಅಂದಾಕ್ಷಣ ನೆನಪಾಗುವ ಮಾತು ಯಾವುದು ?

೨.ಯಾವುದಿಲ್ಲದ ಸಂಕ್ರಾಂತಿಯನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ?

೩.ಸಂಕ್ರಾಂತಿ ಯಲ್ಲಿ ಯಾವ ಆಶಾವಾದ ನಮ್ಮ ಜೊತೆಗಿರುತ್ತದೆ ?

೪.ದನಗಳಿಗೆ ವಂದನೆ ಸಲ್ಲಿಸಲು ಮನುಷ್ಯ ಸಂಕ್ರಾಂತಿ ಹಬ್ಬದಲ್ಲಿ ಏನು ಮಾಡುತ್ತಾನೆ ?

೧೨.ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.

ಒಂದು --------------.(ಕಾಲವಿತ್ತು,ಕಾಲವಿದೆ)ಮನೆಮಕ್ಕಳು ಕೆಮ್ಮಿದ್ದರೆ-------.( ಸಾಕು,ಬೇಕು)ಅಜ್ಜಿ ಮನೆಯ ಹಿಂಬದಿಯ ಕೈ ತೋಟಕ್ಕೆ ನುಗ್ಗಿ ಅದ್ಯಾವುದೋ ಎಲೆ ಬೇರುಗಳನ್ನು------.(ಕೀಳು,ಕಿತ್ತು )ತಂದು ಕಾಯಿಲೆಗಳನ್ನು ಓಡಿಸಲು ಅಣಿಯಾಗುತ್ತಿದ್ದಳು.ದೇಹಕ್ಕೆ ಯಾವುದೇ ಬಗೆಯಲ್ಲೂ ತೊಂದರೆ ______(ಕೊಡದ,ಕೊಡುವ) ರಾಮಬಾಣಗಳು.ಅವು ಈಗ ಕಾಲ______ (ಬದಲಾಗುವುದು,ಬದಲಾಗಿದೆ)ಮನೆಯಂಗಳದಲ್ಲಿ ಮೂಲಿಕೆಯೂ ....... (ಇಲ್ಲ,ಇದೆ) ಒಳಗಡೆ ಅಜ್ಜಿಯೂ (ಇದ್ದಾಳೆ,ಇಲ್ಲ)

೧೩.ಕೆಳಗಿನ ಪದ್ಯದ ಸಾರಾಂಶ ಬರೆಯಿರಿ.

ಎಲ್ಲಾ ಕಡೆಯಲಿ ಕಾಣುವ ಇರುವೆ<br>
ಮೂಸುತ ತಿಂಡಿಯ ಹುಡುಕುವ ಇರುವೆ<br>
ಬೆಲ್ಲನೆಲ್ಲವ ಮೆಲ್ಲುವ ಇರುವೆ<br>
ಎಲ್ಲಾ ಕಡೆಯಲಿ ನೀನಿರುವೆ .

೧೪.ಮುಂದೆ ಕೊಟ್ಟಿರುವ ಶಬ್ದಗಳಿಗೆ ಗುರು ಲಘು ಗುರುತಿಸಿ. ಗೇಯುವ ,ಕೆಸರು , ಬೂದಿಯ ,ಬಚ್ಚಲು



೧೫. ಪಕ್ಕದ ಚಿತ್ರ ನೋಡಿ ಕೊಟ್ಟಿರುವ ಶಬ್ದಗಳನ್ನು ಆಧರಿಸಿ ಕಥೆ ಬರೆಯಿರಿ. ಕಾಗೆ,ಬಾಯಾರಿಕೆ ,ಹುಡುಕು,ಹೂಜಿ ,ನೀರು ,ಕಲ್ಲು, ಹಾಕು , ನೀರು ಕುಡಿ.

**mamatabhagwat1@gmail.com**

**mamatabhagwat1@gmail.com**